

ಹಡಗೊಂದರ ಹಾಯಿಗಳ ತುದಿಯಲ್ಲಿ ಸೇಂಟ್ ಎಲ್ಮೋಸ್ ಫೈರ್ ಕಲಾವಿದನ ಕಲ್ಪನೆಯಲ್ಲಿ

ವಿರುದ್ಧ ದಂಗೆಯೆದ್ದಿದ್ದ ಸ್ಪೇನಿನ ನಾವಿಕ ಹ್ವಾನ್ ಸೆಬಾಸ್ಟಿಯನ್ ಎಲ್ ಕಾನೋ ವಿಕ್ಟೋರಿಯಾ ಹಡಗಿನ ನಾಯಕತ್ವವನ್ನು ವಹಿಸಿಕೊಂಡಿದ್ದ. ಸ್ಪೇನ್‌ಗೆ ಹಿಂತಿರುಗಲು, ನಂತರ ಮತ್ತೆ ಪಶ್ಚಿಮಕ್ಕೆ ಸಾಗುವ ಅಪಾಯಕಾರಿ ನಿರ್ಧಾರವನ್ನು ಎಲ್ ಕ್ಯಾನೋ ತೆಗೆದುಕೊಂಡ. ಆದರೆ ಆ ಸಾಗರ ಪ್ರದೇಶ ಪೋರ್ಚುಗಲ್‌ನ ವಲಯದಲ್ಲಿತ್ತಷ್ಟೆ. ಇದರಿಂದಾಗಿ ಪೋರ್ಚುಗೀಸರ ಕೈಗೆ ಸಿಕ್ಕಿ ಹಾಕಿಕೊಳ್ಳದಿರುವ ಸಲುವಾಗಿ ಹಿಂದೂ ಮಹಾಸಾಗರದ (ಇಂಡಿಯನ್ ಓಷನ್) ದಕ್ಷಿಣ ಪ್ರದೇಶದಲ್ಲಿ ಸಾಗುವುದು ಅವರಿಗೆ ಅನಿವಾರ್ಯವಾಯಿತು.

ಇದಕ್ಕೆ ವಿರುದ್ಧವಾಗಿ ಸ್ಪೇನ್‌ಗೆ ಹಿಂತಿರುಗಲು ಟ್ರಿನಿಡಾಡ್ ಹಡಗು ಮೊಲುಕ್ಕಾ ದ್ವೀಪಗಳಿಂದ ಮತ್ತೆ ಪೂರ್ವಾಭಿಮುಖವಾಗಿ ಬಂದ ಹಾದಿಯಲ್ಲೇ ಸಾಗಿತು. ಆದರೆ ಪೋರ್ಚುಗೀಸರಿಗೆ ನಂತರ ಸೆರೆಸಿಕ್ಕ ಆ ಹಡಗು ಸ್ಪೇನ್ ಅನ್ನು ತಲುಪಲೇ ಇಲ್ಲ.

ಪಶ್ಚಿಮಾಭಿಮುಖವಾಗಿ ಹೊರಟ ವಿಕ್ಟೋರಿಯಾ ವಿಶಾಲವಾದ ದಕ್ಷಿಣ ಹಿಂದೂ ಮಹಾಸಾಗರದಲ್ಲಿ ಸಾಗುವಾಗ, ಅಲ್ಲಿನ ಬಿರುಗಾಳಿಯಿಂದ ಮತ್ತು ಹಸಿವು–ಬಾಯಾರಿಕೆ–ಸ್ಕರ್ವಿ, ಇವುಗಳಿಂದ ವಿಕ್ಟೋರಿಯಾದ ನಾವಿಕರು ತತ್ತರಿಸಿ ಅವರಲ್ಲಿ ಅನೇಕರು ಸಾವಿಗೀಡಾದರು. ಉಳಿದವರು ಆಫ್ರಿಕಾದ ದಕ್ಷಿಣ ಭಾಗವನ್ನು ಸುತ್ತುಹೊಡೆದು ನಂತರ ಮತ್ತೆ ಉತ್ತರಕ್ಕೆ ತೆರಳಿ, ಬಳಿಕ ಪಶ್ಚಿಮ ಆಫ್ರಿಕದ ಆಚೆ ಇರುವ ಕೇಪ್ ವರ್ಡೆ ದ್ವೀಪಗಳಲ್ಲಿ ಪೋರ್ಚುಗೀಸರ ಕೈಗೆ ಸಿಕ್ಕಿಬಿದ್ದರು. ಆದರೂ ಹೇಗೋ ಅವರು ತಪ್ಪಿಸಿಕೊಂಡು, ತಾವು ಸುಮಾರು ಮೂರು ವರ್ಷಗಳ ಹಿಂದೆ ಹೊರಟಿದ್ದ ಸ್ಪೇನ್‌ನ ಸೆವಿಲ್‌ಗೆ ಹಿಂತಿರುಗಿದರು.

## ಮಹಾಯಾನದ ಯಶಸ್ವಿ ಮುಕ್ತಾಯ

1519ನಲ್ಲಿ ಮೆಗಲಾನನ ನೇತೃತ್ವದಲ್ಲಿನ ಐದು ಹಡಗುಗಳಲ್ಲಿ ಹೊರಟಿದ್ದು ಸುಮಾರು 270 ಜನ. ಆ ಪೈಕಿ ಜಗತ್ ಪ್ರದಕ್ಷಿಣೆ ಮಾಡಿ 1522ರಲ್ಲಿ ವಿಕ್ಟೋರಿಯಾದಲ್ಲಿ ಹಿಂತಿರುಗಿದ್ದು 18 ನಾವಿಕರು ಮಾತ್ರ. ನಾಯಕ–ನಾವಿಕ ಮೆಗಲಾನ್‌ನಿಗೆ ಜಗತ್ ಪ್ರದಕ್ಷಿಣೆಯನ್ನು ಪೂರ್ತಿಮಾಡಲಾಗಲಿಲ್ಲ. ಅದು ಅವನ ಉದ್ದೇಶವೂ ಆಗಿರಲಿಲ್ಲವೆನ್ನಿ. ಆದರೆ ತನ್ನ ಪರಮಗುರಿಯಾದ ಮೊಲುಕ್ಕಾ ದ್ವೀಪಗಳ ಹತ್ತಿರವಿರುವ ಫಿಲಿಪ್ಪೀನ್ಸ್ ತನಕ ತೆರಳಿ ಅಲ್ಲಿ ಅಂತ್ಯವನ್ನು ಕಂಡ ಮೆಗಲಾನ್ ದುರದೃಷ್ಟಶಾಲಿಯೇ ಸರಿ.

## ಮಹಾಯಾನದ ಮಹತ್ವ

ಮಾನವ ಇತಿಹಾಸದಲ್ಲೇ ಮೊದಲ ಬಾರಿಗೆ ಜಗತ್ ಪ್ರದಕ್ಷಿಣೆ ಮಾಡಿದ ಮೆಗಲಾನನ ತಂಡದ ಅಮೋಘ ಸಾಧನೆಯೊಂದಿಗೆ ಹೊಸ ವಾಣಿಜ್ಯ ಮಾರ್ಗವೊಂದು ಪರಿಚಯವಾಯಿತು. ಇದಾದ ಸುಮಾರು ನಾಲ್ಕು ಶತಮಾನಗಳವರೆಗೂ ಯೂರೋಪಿನಿಂದ ಪೂರ್ವ ಏಷ್ಯಾಗೆ ಸಾಗಲು ಮೆಗಲಾನ್ ಕಂಡುಹಿಡಿದ ಹಾಗೂ ದಕ್ಷಿಣ ಅಮೆರಿಕದ ತುಟ್ಟ ತುದಿಯ ಸಮೀಪದಲ್ಲಿ ಹಾದುಹೋಗುವ ಆ ದೀರ್ಘವಾದ ಮಾರ್ಗವನ್ನೇ ಅನೇಕ ಹಡಗುಗಳು ಬಳಸುತ್ತಿದ್ದವು.

1915ರಲ್ಲಿ ಪನಾಮಾ ಕಾಲುವೆ ಎಂಬ ಅದ್ಭುತವಾದ ಮಾನವನಿರ್ಮಿತ ಸ್ವರೂಪವನ್ನು ತೋಡಿದ ನಂತರ ಅಟ್ಲಾಂಟಿಕ್ ಹಾಗೂ ಶಾಂತಸಾಗರಗಳು ದಕ್ಷಿಣ ಅಮೆರಿಕದ ಸ್ವಲ್ಪ ಉತ್ತರಕ್ಕೇ ಜೋಡಣೆಗೊಂಡು, ಮೆಗಲಾನನ ದೀರ್ಘಾವಧಿಯ ಮಾರ್ಗ ಅಗತ್ಯವಾಗಲಿಲ್ಲ. ಅದಕ್ಕೆ ಮೊದಲೇ ಯೂರೋಪಿನಿಂದ ಆಫ್ರಿಕಾದ ದಕ್ಷಿಣ ತುದಿಯನ್ನು ಹಾದು ಏಷ್ಯಾಗೆ ಬರುವ ವಾಸ್ಕೋ ಡ ಗಾಮಾನ ದೀರ್ಘವಾದ ಮಾರ್ಗವೂ ಸೂಯೆಜ್ ಕಾಲುವೆ 1869ರಲ್ಲಿ ತೋಡಿದ ನಂತರ ತನ್ನ ಪ್ರಾಮುಖ್ಯತೆಯನ್ನು ಕಳೆದುಕೊಂಡಿತು.

## ಮೆಗಲಾನ್ ಕಂಡುಹಿಡಿದ ಸ್ಥಳಗಳ ಸ್ಥಾನ

ಇಂದು ದಕ್ಷಿಣ ಅಮೆರಿಕದ ತುತ್ತ ತುದಿಯಲ್ಲಿರುವ ಮೆಗಲಾನ್ ಜಲಸಂಧಿ ಹಾಗೂ ಅದರಾಚೆ ಇರುವ ‘ಟಿಯಾರಾ ಡೆಲ್ ಫ್ಯೆಗೋ’ (‘ಬೆಂಕಿಯ ನೆಲ’, ಇದಕ್ಕೆ ಆ ಹೆಸರಿಟ್ಟವನೂ ಮೆಗಲಾನನೇ) ದ್ವೀಪ, ಇವ ಅರ್ಜಂಟೀನಾ ಹಾಗೂ ಚಿಲಿ ದೇಶಗಳ ಉತ್ತಮ ಪ್ರವಾಸಿ ತಾಣಗಳಾಗಿವೆ. ಆದರೆ ಉತ್ತಮವಾದ ಐಷಾರಾಮಿ ಹೋಟೆಲ್ ಹಾಗೂ ತಂಗುದಾಣಗಳು, ಸುಖವಾಗಿ ಪಯಣಿಸಬಹುದಾದ ದೋಣಿಗಳು, ಕುದುರೆಗಳು, ಚಕ್ರಗಳುಳ್ಳ ವಾಹನಗಳು ಹಾಗೂ ಪ್ರವಾಸಿ ಗೈಡ್‌ಗಳಿಂದ ತುಂಬಿರುವ ಹತ್ತಿರದ ಪ್ರದೇಶಗಳಿಂದ ಈ ಸ್ಥಳಗಳಲ್ಲಿ ಪ್ರವಾಸದ ಸವಿಯನ್ನು, ನಿಸರ್ಗದ ಸೌಂದರ್ಯವನ್ನು ಆಸ್ವಾದಿಸುತ್ತಾ ಇರುವ ಜನರು ಇವುಗಳನ್ನು ಕಂಡುಹಿಡಿಯುವಾಗ ಮೆಗಲಾನ್ ಪಟ್ಟ ಕಷ್ಟವನ್ನು ಎಷ್ಟರ ಮಟ್ಟಿಗೆ ಮನಸ್ಸಿಗೆ ತಂದುಕೊಳ್ಳುತ್ತಾರೋ?

ಮೆಗಲಾನ್ ಗತಿಸಿದ ಫಿಲಿಪ್ಪೀನ್ಸ್ ಇಂದು ಕೆಥೋಲಿಕ್ ಪಂಥ ಪ್ರಮುಖವಾಗಿ ಕಂಡುಬರುವ ಆಗ್ನೇಯ ಏಷ್ಯಾದ ಒಂದು ರಾಷ್ಟ್ರವಾಗಿದೆ. ಇನ್ನು ಮೆಗಲಾನನ ಪರಮ ಗುರಿಯಾಗಿದ್ದ ಮೊಲುಕ್ಕಾಸ್ ದ್ವೀಪಗಳು ಇಂಡೋನೇಷಿಯಾದ ಭಾಗವಾಗಿದ್ದು, ಇಂದಿಗೂ ಅಲ್ಲಿನ ಸುತ್ತಮುತ್ತ ಪ್ರದೇಶಗಳಲ್ಲಿ ಸಾಂಬಾರ ಪದಾರ್ಥಗಳು ಬೆಳೆಯುತ್ತಿವೆ. ಆದರೆ ಇಂದಿನ ಜಗತ್ತಿನಲ್ಲಿ ಅವು ಮೆಗಲಾನನ ಕಾಲದಲ್ಲಿದ್ದಂತೆ ಚಿನ್ನದಷ್ಟು ದುಬಾರಿಯಾಗಿಲ್ಲ ಎನ್ನುವುದು ನಮ್ಮ ಪುಣ್ಯ.

ಒಂದು ಕಾಲದಲ್ಲಿ ಜಗತ್ತಿನಾದ್ಯಂತ ಪ್ರಾಮುಖ್ಯವನ್ನು ಪಡೆದಿದ್ದ ಸ್ಪೇನ್ ಮತ್ತು ಪೋರ್ಚುಗಲ್ ದೇಶಗಳು ಇಂದು ಹೆಚ್ಚು ಸುದ್ದಿಯಲ್ಲೇ ಇರುವುದಿಲ್ಲ. ಅನೇಕರಿಗೆ ಇವು ಯೂರೋಪ್‌ನಲ್ಲಿ ಎಲ್ಲಿವೆ ಎಂಬುದೇ ತಿಳಿದಿರುವುದಿಲ್ಲ. ಅಷ್ಟು ಬದಲಾಗಿದೆ ಇಂದಿನ ಜಗತ್ತು. ಭಾರತ ಸ್ವಾತಂತ್ರ್ಯ ಪಡೆದ ಸುಮಾರು 14 ವರ್ಷಗಳ ನಂತರವೂ ಗೋವಾವನ್ನು ತನ್ನ ಕಪಿಮುಷ್ಟಿಯಲ್ಲಿ ಬಂಧಿಸಿಟ್ಟುಕೊಂಡಿದ್ದ ಪೋರ್ಚುಗಲ್‌ನಿಂದ ಭಾರತ 1961ರಲ್ಲಿ ಮಾಡಿದ ‘ಗೋವಾದ ವಿಮೋಚನೆ’ ಮತ್ತು ಗೋವಾದಲ್ಲಿ ಕಾಣುವ ಪೋರ್ಚುಗೀಸ್